OS 86/2014 C/w 312/2015
DW1

ದಿನಾಂಕ 19.7.2022 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಕೆ ವಕೀಲರಿಂದಃ

1. ಕೃಷ್ಣ ಭಟ್ ರವರು ಸರ್ಕಾರಿ ಜಾಗದಲ್ಲಿ ಯಾವಾಗ ಮನೆ ಕಟ್ಟಿದ್ದಾರೆ ಎಂದು ನನಗೆ ನೆನಪಿಲ್ಲ. ಅವರು ವಾಸವಿರುವ ಮನೆ ನಾನು ಆ ಸ್ಥಳಕ್ಕೆ ಬರುವಾಗ ಇತ್ತು ಎಂದರೆ ಸರಿ. ಆ ಮನೆಯಲ್ಲಿ ಕೃಷ್ಣ ಭಟ್ ರವರು ವಾಸವಿದ್ದಾರೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿಗೆ ಬರುವಾಗ ಕೃಷ್ಣ ಭಟ್ ರವರು ವಾಸವಿದ್ದ ಮನೆ ಎಲ್ಲಿಗೆ ಹೋಯಿತು ಎಂದರೆ ನೆನಪಿಲ್ಲ. ಕೃಷ್ಣ ಭಟ್ ರವರು ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿದ್ದಾರೆ ಎಂದು ತಹಶೀಲ್ದಾರ್ ಮತ್ತು ಪಂಚಾಯಿತಿಗೆ ದೂರು ನೀಡಿದ್ದೇನೆ ಎಂದರೆ ನೆನಪಿಲ್ಲ. ಕೃಷ್ಣ ಭಟ್ ರವರ ಮನೆಗೆ ಹೋಗಲು ಮಾರ್ಗ ಇದೆಯಾ ಎಂದರೆ ಉಂಟು. ನಾನು ಈಗ ವಾಸವಿರುವ ಮನೆಗೆ ಹೋಗಲು ಮಾರ್ಗದ ವ್ಯವಸ್ಥೆ ಇದೆ. ಕೃಷ್ಣ ಭಟ್ ರವರು ಮಾರ್ಗಕ್ಕೆ ಆತಂಕ ನೀಡುತ್ತಾರೆ ಎಂದು ಪೊಲೀಸರಿಗೆ ದೂರು ನೀಡಿದ್ದೀರಾ ಎಂದರೆ ನೆನಪಿಲ್ಲ.

2. ಸ.ನಂಃ 272/2P2 ರ ಬಾಪ್ತು 13 ಸೆಂಟ್ ಗೆ ಸಂಬಂಧಪಟ್ಟಂತೆ ಇದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೀರಾ ಎಂದರೆ ಸರಿ. ಆ ದಾವೆ ಏನಾಗಿದೆ ಎಂದು ನೆನಪಿಲ್ಲ. ದಿಃ 17.9.2013 ರಂದು ಮೆಮೋವನ್ನು ಸಲ್ಲಿಸಿ ಸದರಿ ದಾವೆಯನ್ನು ವಾಪಾಸು ಪಡೆದಿದ್ದೇನೆ ಎಂದರೆ ನೆನಪಿಲ್ಲ. ಆ ದಾವೆಯಲ್ಲಿ ಏನು ಪರಿಹಾರ ಕೋರಿ ದಾವೆ ಸಲ್ಲಿಸಿದ್ದೆ ಎಂದು ನೆನಪಿಲ್ಲ.

3. ಮನೆ ತೆರಿಗೆಯನ್ನು ಪಡೆದುಕೊಳ್ಳಲು ಒಪ್ಪಿಗೆ ಪತ್ರ ಸಲ್ಲಿಸಿದ್ದೀರಾ ಎಂದರೆ ನನಗೆ ನೆನಪಿಲ್ಲ . ಒಪ್ಪಿಗೆ ಪತ್ರ ಮಾಡುವ ಪೂರ್ವದಲ್ಲಿ ಕರಾರು ಮಾಡಿಕೊಂಡಿದ್ದೀರಾ ಅಥವಾ ಕರಾರು ಆದ ಪೂರ್ವದಲ್ಲಿ ಒಪ್ಪಿಗೆ ಪತ್ರ ಆಗಿರುತ್ತದೆಯಾ ಎಂದರೆ ನನಗೆ ನೆನಪಿಲ್ಲ . ಕ್ರಯ ಪತ್ರ ಮಾಡಿಕೊಳ್ಳಲು ಸರ್ಕಾರದಿಂದ ನಿರಪೇಕ್ಷಣ ಪತ್ರ ಬೇಕು ಎಂಬುದು ನನಗೆ ಗೊತ್ತಿಲ್ಲ. ನನ್ನ ಮತ್ತು ಕೃಷ್ಣ ಭಟ್ ರವರ ನಡುವೆ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಯಾವುದೇ ಕ್ರಯ ಕರಾರು ಆಗಿರಲಿಲ್ಲ ಎಂದರೆ ಸರಿಯಲ್ಲ . ಅದರ ಬಾಪ್ತು ಕೃಷ್ಣ ಭಟ್ ರವರಿಗೆ ಯಾವುದೇ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಸೇರಿ ಕ್ರಯ ಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ